ಕೃಷ್ಣಾ ಮೇಲ್ದಂಡೆ ಯೋಜನೆ ಪ್ರಾಧಿಕಾರ ರಚನೆ

1096 (1699) ಶ್ರೀ ಬಸವರಾಜ್ ಪಾಟೀಲ್ ಅಟ್ಟೂರು (ಬಸವಕಲ್ಯಾಣ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೃಷ್ಣಾ ಮೇಲ್ದಂಡೆ ಯೋಜನೆಗೆ ಪ್ರಾಧಿಕಾರವನ್ನು ರಚಿಸುವ ಉದ್ದೇಶ ಸರ್ಕಾರಕ್ಕಿದೆಯೇ;

ಆ) ಇದ್ದರೆ ಯಾವಾಗ ರಚಿಸಲಾಗುವುದು ಮತ್ತು ಇದರ ಉದ್ದೇಶವೇನು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) :

ಅ) ಕೃಷ್ಣಾ ನದಿ ಕೊಳ್ಳದಲ್ಲಿರುವ ಎಲ್ಲಾ ಭಾರೀ ಮತ್ತು ಮಧ್ಯಮ ನೀರಾವರಿ ಯೋಜನೆಗಳ ಕಾರ್ಯಾಚರಣೆ ಹಾಗೂ ನಿರ್ವಹಣೆಗಾಗಿ ಸ್ವಾಯತ್ತ ಪ್ರಾಧಿಕಾರ ರಚಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಬರುವ ಎಲ್ಲ ಯೋಜನೆಗಳನ್ನು ತೀವ್ರಗತಿಯಲ್ಲಿ ಪೂರ್ಣಗೊಳಿಸುವ ಹಿನ್ನಲೆಯಲ್ಲಿ, ಹಾಗೂ 2000 ಇಸವಿ ಒಳಗಡೆ ನೀರಿನ ಸಂಪೂರ್ಣ ಉಪಯೋಗ ಮಾಡುವ ಹಿನ್ನೆಲೆಯಲ್ಲಿ ಪ್ರಾದಿಕಾರವನ್ನು ರಚಿಸುವ ವಿಷಯವು ಪರಿಶೀಲನೆಯಲ್ಲಿದ್ದು, ಆದಷ್ಟು ಶೀಘ್ರವಾಗಿ ಇದರ ಬಗ್ಗೆ ಅಂತಿಮ ನಿರ್ಧಾರ ತೆಗೆದುಕೊಳ್ಳಲಾಗುವುದು.

ಮುಂಡಗೋಡು ತಾಲ್ಲೂಕಿನಲ್ಲಿರುವ ಗ್ರಾಮಗಳಿಗೆ ಕಾಲುವೆ ಮೂಲಕ ನೀರಾವರಿ

1097 (1700) ಶ್ರೀ ಪಿ.ಸಿ. ಸಿದ್ದಣ್ಣ ಗೌಡರ್ (ಕಲಘಟಗಿ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಮುಂಡಗೋಡ ತಾಲ್ಲೂಕಿನಲ್ಲಿರುವ ಅತ್ತಿವೇರಿ ಪ್ರಾಜೆಕ್ಟ್‌ನಿಂದ ಕಲಘಟಗಿ ತಾಲ್ಲೂಕಿನ ಚಿಮ್ಮಿಗಟ್ಟಿಹಾಗೂ ನೆಲ್ಲೆ ಹರವಿ ಗ್ರಾಮದ ಜಮೀನುಗಳಿಗೆ ಕಾಲುವೆ ಮೂಲಕ ನೀರಾವರಿ ಮಾಡುವ ಯೋಜನೆ ಸರ್ಕಾರದ ಮುಂದೆ ಇರುವುದು ನಿಜವಲ್ಲವೆ;

2) ಹಾಗಿದ್ದಲ್ಲಿ ಈ ಯೋಜನೆಯನ್ನು ಕಾರ್ಯಗತಗೊಳಿಸಲು ಇನ್ನು ಎಷ್ಟು ಕಾಲಾವಕಾಶದ ಅಗತ್ಯವಿದೆ. ಇದಕ್ಕಾಗಿ ಬಿಡುಗಡೆ ಮಾಡಲಾಗಿರುವ ಹಣವೆಷ್ಟು?

3) ಈ ಸೌಲಭ್ಯದ ನಂತರ ಮೇಲ್ಕಂಡ ಎರಡೂ ಗ್ರಾಮಗಳಲ್ಲಿ ಎಷ್ಟು ಎಕರೆ ಜಮೀನುಗಳಿಗೆ ನೀರಾವರಿ ಸೌಲಭ್ಯ ದೊರೆಯುತ್ತದೆ?

4) ರೈತರ ಹಿತದೃಷ್ಟಿಯಿಂದ ಆದಷ್ಟು ಬೇಗ ಈ ಯೋಜನೆಯನ್ನು ಕಾರ್ಯಗತಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೆ?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು) :

1) ಮುಂಡಗೋಡ ತಾಲೂಕಿನ ಅತ್ತಿವೇರಿ ಕೆರೆ ಯೋಜನೆಯಿಂದ ಕಲಘಟಗಿ ತಾಲೂಕು ವೈಕಿ ನಲ್ಲಿಹರವಿ ಗ್ರಾಮದ ಜಮೀನುಗಳಿಗೆ ಮಾತ್ರ ನೀರಾವರಿ ಮಾಡುವ ಯೋಜನೆ ಇರುತ್ತದೆ. ಬೊಮ್ಮಗಟ್ಟಿ ಗ್ರಾಮದ ಜಮೀನು ಎತ್ತರ ಪ್ರದೇಶವಾಗಿದ್ದು, ನೀರಾವರಿ ಸೌಲಭ್ಯ ಒದಗಿಸಲು ತಾಂತ್ರಿಕವಾಗಿ ಸಾಧ್ಯವಿಲ್ಲ.

2) ಅತ್ತಿವೇರಿ ಕೆರೆಯ ಯೋಜನೆಯ ಕೆಲಸವು ಪೂರ್ತಿಗೊಂಡಿರುತ್ತದೆ. ಈಗ ಕಾಲುವೆಯ ಲೈನಿಂಗ್ ಕೆಲಸವು ಪ್ರಗತಿಯಲ್ಲಿರುತ್ತದೆ. ಈ ಕೆಲಸಗಳಿಗಾಗಿ 1991-92ನೇ ಸಾಲಿನಲ್ಲಿ 1.5 ಲಕ್ಷ ರೂಪಾಯಿಗಳ ಹಣ ಬಿಡುಗಡೆ ಮಾಡಲಾಗಿದ್ದು, 1992ನೇ ಮಾರ್ಚ್ ಅಂತ್ಯದಲ್ಲಿ ಕಾರ್ಯಗತಗೊಳಿಸಲು ಉದ್ದೇಶಿಸಲಾಗಿದೆ.